<u>ದಿನಾಂಕಃ **09-01-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃಶ್ರೀ ಸಿ.ಎಮ್.ಎನ್. ಪರವಾಗಿ ಶ್ರೀ ಎಸ್.ಎಲ್.ಎಸ್. ವಕೀಲರಿಂದ ಆರೋಪಿ ಪರಃ</u>

**8.** ದಿನಾಂಕಃ 24-03-2020 ರಂದು ದೇಶಾದ್ಯಂತ ಕೋರೋನಾ ಬಂದಿತ್ತು ಅಂದರೆ ಹೌದು. ನಂತರ ಕೋರೋನಾ ತುಂಬಾ ಜಾಸ್ತಿಯಾಗಿತ್ತು ಅಂದರೆ ಹೌದು. ಕೋರೋನಾ ಸಾಂಕ್ರಾಮಿಕ ರೋಗ ಹೆಚ್ಚಾಗಿರುವುದರಿಂದ ಸರ್ಕಾರದವರು ಲಾಕ್ ಡೌನ ನಿಯಮ ಜಾರಿಗೆ ತಂದಿರುತ್ತಾರೆ ಅಂದರೆ ಹೌದು. 1 ವರೆಯಿಂದ 2 ವರ್ಷದವರೆಗೆ ಕೋರೋನಾ ಇತ್ತು ಅಂದರೆ ಇರಬಹುದು. ಕೋರೋನಾ ಸಂದರ್ಭದಲ್ಲಿ ಲಾಕ್ ಡೌನ ಇದ್ದುದ್ದರಿಂದ ಓಡಾಡಲಿಕ್ಕೆ ನಿರ್ಭಂದ ಇತ್ತು ಅಂದರೆ ಹೌದು. ನಿರ್ಬಂದವನ್ನು ಉಲ್ಲಂಘಿಸಿ ಜನರು ಓಡಾಡಿದ್ದರೆ ಪೋಲಿಸರು ಕ್ರಮ ಕೈಗೊಳ್ಳುತ್ತಿದ್ದರು ಅಂದರೆ ಹೌದು. ಆ ಸಮಯದಲ್ಲಿ ಸರ್ಕಾರಿ ಕಛೇರಿಗಳು ಹಾಗೂ ಶಾಲೆಗಳು ಬಂದ್ ಇದ್ದವೂ ಅಂದರೆ ಹೌದು. 2019-2020 ರಲ್ಲಿ ಕೋರೋನದಿಂದ ಸಾಕಷ್ಟು ಸಾವು ನೋವುಗಳಾಗಿದ್ದರಿಂದ ಯಾರನ್ನು ಓಡಾಡಲು ಬಿಡುತ್ತಿರಲಿಲ್ಲ ಅಂದರೆ ಹೌದು. ರಮೇಶ ಮಂಜಪ್ಪ ಕಲಿವಾಳ ಇವರಿಂದ ಆರೋಪಿಯ ಪರಿಚಯವಾಗಿರುತ್ತದೆ. ಆರೋಪಿಯ ಮಗ ನನಗೆ 2017-2018 ರಿಂದ ಪರಿಚಯಸ್ಥರಿರುತ್ತಾರೆ. ಜಗದೀಶ ಈರೋಜಿ ಹಾಗೂ ನೀವು ಸಾಕಷ್ಟು ಹಣದ ವ್ಯವಹಾರ ಮಾಡಿರುತ್ತೀರಿ ಅಂದರೆ ಹೌದು. ಜಗದೀಶ ಈರೋಜಿ ಆರೋಪಿತನ ಮಗ ಎಂದರೆ ಸರಿ. ಅವರ ಬಳಿ 5-6 ಸಲ ಹಣದ ವ್ಯವಹಾರ ಮಾಡಿರುತ್ತೇನೆ. ಆರೋಪಿಯ ಮಗನಿಗೆ 50 ಸಾವಿರ, 70 ಸಾವಿರ ಹಣ ನೀಡಿರುತ್ತೇನೆ. ಜಗದೀಶ ಈರೋಜಿ ಹಾಗೂ ನನ್ನದು ಈಗಲೂ ವ್ಯವಹಾರ ಇರುತ್ತದೆ. ಜಗದೀಶ ಈರೋಜಿ ವ್ಯವಹಾರ ಈ ಪ್ರಕರಣದ ಹಣಕ್ಕೆ ಸಂಬಂಧಿಸಿದ್ದು ಅಂದರೆ ಸರಿ. ಸಾಕ್ಷಿ ಮುಂದುವರೆದು ಈ ವ್ಯವಹಾರದಲ್ಲಿ ಆರೋಪಿಯು ಸಹ ಇರುತ್ತಾರೆ. ನೀವು ಹಣವನ್ನು ಜಗದೀಶ ಈರೋಜಿಗೆ ಕೊಟ್ಟಿರುತ್ತೀರಿ ಅಂದರೆ ಸರಿಯಲ್ಲ, ಆರೋಪಿಗೆ ಕೊಟ್ಟಿರುತ್ತೇನೆ ಅಂತಾ ಸಾಕ್ಷ್ಯ ನುಡಿಯುತ್ತಾರೆ. ಜಗದೀಶ ಈರೋಜಿ , ಆರೋಪಿಗ ಈಗ ಬೇರೆ ಬೇರೆ

ಇರುತ್ತಾರೆ ಅಂದರೆ ಗೊತ್ತಿಲ್ಲ. ನೀವು ಮತ್ತು ಜಗದೀಶ ಈರೋಜಿ ಇಬ್ಬರೂ ಮಿಲಾಫೆಯಾಗಿ ಆರೋಪಿ ನೀಡಿರುವ ಚೆಕ್‌ನ್ನು ದುರುಪಯೋಗಪಡಿಸಿಕೊಂಡಿರುತ್ತೀರಿ ಅಂದರೆ ಸರಿಯಲ್ಲ.

**9.** ಈ ನೋಟಿಸ ಕೊಡುವ ಪೂರ್ವದಲ್ಲಿ ನೀವು ಸಾಲ ಮಾಡಿದ್ದು, ಸಾಲಗಾರರು ಬಹಳಷ್ಟು ತೊಂದರೆ ಕೊಟ್ಟಿರುತ್ತಾರೆ ಅಂದರೆ ಈಗ ನೆನಪಿಲ್ಲ. ನಿಮ್ಮ ಸಾಲಗಾರರಿಗೆ ನೋಟಿಸ್ ಕೊಟ್ಟಿದ್ದು ಹಣ ಬರುವುದಿದೆ ಅಂತಾ ಹೇಳಿ, ಆರೋಪಿಗೆ ಉತ್ತರ ಕೊಡಬೇಡಾ ಅಂತಾ ಹೇಳಿರುತ್ತೀರಿ ಅಂದರೆ ಸರಿಯಲ್ಲ. 2019-2020 ರಲ್ಲಿ ನಿರ್ಭಂದ ಇದ್ದುದ್ದರಿಂದ ಆರೋಪಿಯ ಮಗನ ಜೊತೆ ಮಿಲಾಫೆಯಾಗಿ, ದಾಖಲೆಗಳನ್ನು ಸೃಷ್ಠಿ ಮಾಡಿಕೊಂಡು ಈ ಪ್ರಕರಣ ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ. ಆರೋಪಿಗೆ ಕನ್ನಡದಲ್ಲಿ ಹೆಸರು ಬರೆಯುವುದನ್ನು ಹೊರತುಪಡಿಸಿ ಓದಲು ಬರೆಯಲು ಬರುವುದಿಲ್ಲ ಅಂದರೆ ಸರಿಯಲ್ಲ. ಆರೋಪಿತಳ ವ್ಯವಹಾರಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆ ಹಾಜರಪಡಿಸಿರುವುದಿಲ್ಲ ಅಂದರೆ ನೆನಪಿರುವುದಿಲ್ಲ. ಆರೋಪಿಗೆ ರೂ. 4,70,000/- ಗಳನ್ನು ಸೆಪ್ಟೆಂಬರ್ 2019 ರಲ್ಲಿ ಕೈಗಡ ಸಾಲ ನೀಡಿರುತ್ತೇನೆ ಅಂತಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಅಂದರೆ ಸರಿಯಲ್ಲ. ಜಗದೀಶ ಈರೋಜಿ ಇವರು ಮಾಡಿದ ವ್ಯವಹಾರಕ್ಕೆ ಆರೋಪಿಯ ಚೆಕ್‌ಗಳನ್ನು ನೀಡಿದ್ದು, ಆರೋಪಿ ನಿಮ್ಮ ಬಳಿ ವ್ಯವಹಾರ ಮಾಡಿರುತ್ತಾರೆ ಅಂತಾ ಈ ಪ್ರಕರಣ ದಾಖಲಿಸಿರುತ್ತೀರಿ ಅಂದರೆ ಸರಿಯಲ್ಲ. ಆರೋಪಿಯೊಂದಿಗೆ ಯಾವುದೇ ಕೈಗಡ ಸಾಲ ಮಾಡದೇ ಇದ್ದರೂ ಸಹ ಜಗದೀಶ ಇವರೊಂದಿಗೆ ಮಿಲಾಫೆಯಾಗಿ ಈ ಪ್ರಕರಣ ದಾಖಲಿಸಿರುತ್ತೀರಿ ಅಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ**.)**

ಓ ಹೇ ಕೇ ಸರಿ ಇದೆ**.**

-ಸಹಿ-
ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.

ಸಿ.ಸಿ. ನಂ. 1757/2023
ಪಿಡಬ್ಲ್ಯೂ-1